ಹದಿನಾಲ್ಕು ವರ್ಷದ ಬಾಲಕನಾಗಿದ್ದಾಗಿನಿಂದ ಕವನ ಬರೆಯುತ್ತಿದ್ದು, ನವೋದಯ ಸಾಹಿತ್ಯದ ಬೆಳವಣಿಗೆ ಮತ್ತು ಬದಲಾವಣೆಗೆ ಸ್ಪಂದಿಸಿದವರು. 1970ರಲ್ಲಿ ಶ್ರೇಷ್ಠ ಅನುದಾನಕ್ಕೆ ಹಿಂದಿನ ಸೋವಿಯತ್ ಒಕ್ಕೂಟದ ನೆಹರೂ ಶಾಂತಿ ಪ್ರಶಸ್ತಿ, 1985ರಲ್ಲಿ 'ಬಕುಲದ ಹೂವುಗಳು' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ 1993ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ್ದು, ಶ್ರೀಯುತರು ವಾದಿರಾಜರ ಕೃತಿಗಳ ಬಗ್ಗೆ ಅಧ್ಯಯನ ನಡೆಸಲು ಕೇಂದ್ರ ಸರ್ಕಾರದ ಫೆಲೋಶಿಪ್ ಕೂಡ ಪಡೆದಿದ್ದರು. ಶ್ರೀ ಎಕ್ಕುಂಡಿಯವರು 'ಸಂತಾನ, ಮತ್ಸಗಂಧ, ಹಾವಾಡಿಗರ ಹುಡುಗ, ಬೆಳ್ಳಕ್ಕಿ ಸೇರಿದಂತೆ ಹಲವಾರು ಕವನಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದಸ್ಯರು ಮೌನ ಆಚರಿಸಿದ ನಂತರ)

ಈ ಸದನ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಲಾಗುವುದು.

ಕಾವೇರಿ ನ್ಯಾಯ ಮಂಡಳಿ ಬಗ್ಗೆ ಮುಂದುವರೆದ ಚರ್ಚೆ

+ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಕಾವೇರಿ ವಿಚಾರದಲ್ಲಿ ಏಕೆ ಇಷ್ಟೊಂದು ತಾತ್ಸಾರ ಮನೋಭಾವ ತಳೆದಿದೆ. ನಾನು ಇದನ್ನು ತಾತ್ಸಾರ ಮನೋಭಾವ ಎಂದು ಕರೆಯುತ್ತೇನೆ. ಏಕೆಂದರೆ, ನೀವು ಆಸಕ್ತಿ ವಹಿಸಿ ಕೆಲಸ ಮಾಡುತ್ತಿರಬಹುದು. ಅದು ನನಗೆ ಗೊತ್ತಿದೆಯೇ? ಏನು ಮಾಡಿದ್ದೀರೆಂದು ಗೊತ್ತಾಗಬೇಕು, ಈ ಸದನದ ಸದಸ್ಯರಿಗೆ ಗೊತ್ತಾಗಬೇಕು; ಈ ರಾಜ್ಯದ ಜನರಿಗೆ ಗೊತ್ತಾಗಬೇಕು. ಅಥವಾ ನಮ್ಮ ಸರ್ಕಾರಕ್ಕೆ ಏನಾದರೂ ಇಕ್ಕಟ್ಟು ಇದ್ದರೆ, ಎಲ್ಲವನ್ನೂ ಹೇಳುವುದಕ್ಕಾಗದೇ ಇದ್ದರೂ ಹೇಳುವಷ್ಟಾದರೂ ಹೇಳಬೇಕಾಗಿತ್ತು. ನಾನು ಏಕೆ ಹೇಳುತ್ತಿದ್ದೇನೆಂದರೆ, ತಮಿಳುನಾಡಿನಲ್ಲಿ ರೈತಸಂಘದವರು ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕಿದಂಥ ಕಾಲದಲ್ಲಿ....

11.30 ಎ.ಎಂ

ತಮಿಳುನಾಡು ಸರ್ಕಾರವೇ ಕೇಸನ್ನೂ ನಡೆಸಿತು. ಆ ಕೇಸಿನಲ್ಲಿ ಅವರೇ, ಇಂಪ್ಲೀಡ್ ಆಗಿ We adopt the stand of ರೈತ ಸಂಘ ಅಂತ ಹೇಳಿ ಒಂದು ಅಫಿಡವಿಟ್ ಹಾಕಿದರು. ಈಗ ನಮ್ಮಲ್ಲಿ ನನಗೆ ಗೊತ್ತಿರುವ ಹಾಗೆ ಖಾಸಗಿ ಅರ್ಜಿಗಳು 4 ಇವೆ. ಈ ಕಾವೇರಿಗೆ ಸಂಬಂಧಪಟ್ಟ ಹಾಗೆ ನನ್ನದು ಸೇರಿ. ಈ ಅರ್ಜಿಗಳ ಬಗ್ಗೆ ಏನು ಅಂತ ವಿಚಾರ ಅಂತ ತಿಳಿದುಕೊಳ್ಳುವಂಥ ಮನಸ್ಸು ನಮ್ಮ ಸರ್ಕಾರ ಮಾಡಲಿಲ್ಲ.

ಅಧ್ಯಕ್ಷರು : ಮಾನ್ಯ ಸಭಾನಾಯಕರು ಇಲ್ಲಿಗೆ ಬಂದು ಒಂದು ಹೇಳಿಕೆಯನ್ನು ನೀಡಿದ ಮೇಲೆ ಬಹಳ ವಿಸ್ತೃತವಾದಂತಹ ಒಂದು ಚರ್ಚೆಯನ್ನು ಇಟ್ಟುಕೊಳ್ಳೋಣ. ನಾನು ತಮ್ಮಲ್ಲಿ, ಸನ್ಮಾನ್ಯ ವಾಟಾಳ್ ನಾಗರಾಜರವರರಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ ಪ್ರಶ್ನೋತ್ತರ ಇದೆ. ನಮಗೆ ಇವತ್ತು ಹಕ್ಕುಚ್ಯುತಿ ನಿರ್ಣಯ ಇರುವುದರಿಂದ ತಾಂತ್ರಿಕವಾಗಿ ಪ್ರಶ್ನೋತ್ತರ ಆದ ಮೇಲೆ ನೇರವಾಗಿ ಅದನ್ನು ತೆಗೆದುಕೊಳ್ಳಬೇಕಾಗುತ್ತೆ. ಶೂನ್ಯ ವೇಳೆ ಇರುವುದಿಲ್ಲ ಆದ್ದರಿಂದ ಇವತ್ತು ಈ ಒಂದು ವಿಶೇಷ ಸಂದರ್ಭವನ್ನು ಹಾಗೇ ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ತಮಗೆ ಈ ವಿಷಯವನ್ನು ಪ್ರಸ್ತಾಪ ಮಾಡತಕ್ಕಂಥಾದ್ದಕ್ಕೆ ಅವಕಾಶ ಕೊಡುತ್ತೇನೆ. ಸನ್ಮಾನ್ಯ ಉಪನಾಯಕರು ಒಂದು ಹೇಳಿಕೆಯನ್ನು ಕೊಡುತ್ತಾರೆ. ಸನ್ಮಾನ್ಯ ವಾಟಾಳ್ ನಾಗರಾಜರವರೇ ಮತ್ತು ಸನ್ಮಾನ್ಯ ಶಿವಕುಮಾರರವರೇ ತಮಗೆ ಈ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಸನ್ಮಾನ್ಯ ಇತರೇ ಸದಸ್ಯರ ಕುತೂಹಲ ಕೂಡ ಪ್ರಶ್ನೋತ್ತರ ಕಡೆಗೆ ಇರುತ್ತದೆ. ದಯಮಾಡಿ ತಾವು ಸಹಕರಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾಧ್ಯಕ್ಷರೇ, ನನ್ನದು ಒಂದೇ ಒಂದು ವಿನಂತಿ. ನನಗೆ ಆಶ್ಚರ್ಯ ಅಂತ ಅನಿಸುತ್ತದೆ ಸನ್ಮಾನ್ಯ ನಂಜೇಗೌಡರು ಹೇಳುವಂತಹ ಮಾತು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಅವರ ಜೊತೆಯಲ್ಲಿ ದೂರವಾಣಿ ಮೂಲಕ ಮಾತನಾಡಿ ನಾಳೆ 9 ಗಂಟೆಯೊಳಗಾಗಿ ನಾವು ಇದಕ್ಕೆ ಅಬ್ಜಕ್ಷನ್ಸ್ ಫೈಲ್ ಮಾಡಬೇಕು, ತುರ್ತಾಗಿ ಅಂತ ಹೇಳಿದ್ದಾರೆ. ಅಂದರೆ ಇದರ ಅರ್ಥ ಮುಖ್ಯಮಂತ್ರಿಗಳು ಬಹಳ ಕಳಕಳಿಯಿಂದ ಒಂದು ರೀತಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಅಂತ ಅನಿಸಿದರೂ ಕೂಡ, ನನಗನ್ನಿಸುವುದು ಅವರು ಇಲ್ಲಿ ಇದ್ದಾಗ ಲಾ ಡಿಪಾರ್ಟ್‌ಮೆಂಟ್ ಇದೆ ವ್ಯವಸ್ಥೆ ಇದೆ ನಾಳೆ ಅಬ್ಜಕ್ಷನ್ಸ್ ಫೈಲ್ ಮಾಡಬೇಕಾಗಿದೆ ಪೂರ್ವಪರ ಚಿಂತನೆ ಮಾಡಿ ಸಿದ್ಧತೆ ಸಲಹೆಗಳನ್ನು ತೆಗೆದುಕೊಂಡು ಕನಸಲ್ಟ ಮಾಡಿ ರೆಡಿ ಮಾಡಿಕೊಂಡು ಹೋಗಬೇಕಾಗುತ್ತದೆ. ತುರ್ತಾಗಿ ಮಾಡಿಕೊಡುತ್ತೇನೆಂದು ಹೇಳಿದರೆ ಇದು ನಮಗೆಲ್ಲರಿಗೂ ಆಘಾತ ತರುವಂತಹ ಸಂಗತಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಲಾ ಮಿನಿಸ್ಟರ್ ಇದ್ದಾರೆ, ಏನು ಸಲಹೆ ನೀಡಿ ಕಳುಹಿಸಿದ್ದಾರೆ, ಅಂತ ಹೇಳು. ಯಾರೇ ಮುಖ್ಯಮಂತ್ರಿ ಆಗಿ ಆ ಸ್ಥಾನದಲ್ಲಿ ಕುಳಿತರೆ ಎಕ್ಸರ್ಪಟ್ಸ ಆಗುವುದಕ್ಕೆ ಸಾಧ್ಯವಿಲ್ಲ. ಲಾ ಡಿಪಾರ್ಟಮೆಂಟ್ ಒಪೀನಿಯನ್ ತೆಗೆದುಕೊಂಡು ಇಲ್ಲಿ ಅವರೆಲ್ಲಾ ಚಿಂತನೆ ಮಾಡಿ ಅವರ ಅಭಿಪ್ರಾಯ ತೆಗೆದುಕೊಂಡೇ ಅವರು ಡೆಲ್ಲಿಗೆ ಹೋಗಿದ್ದಾರೆಂದು ನಾನು ತಿಳಿದಿದ್ದೇನೆ. ಉಪಮುಖ್ಯಮಂತ್ರಿಗಳನ್ನು ಮಾಡಿರುವಂಥಾ ಉದ್ದೇಶವೇನೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯ, ಇಡೀ ದೇಶವನ್ನೂ ತಿರುಗುವಂತಹ ಕಾಲದಲ್ಲಿ ಅಗತ್ಯ ಇದ್ದಾಗ ಮುಖ್ಯಮಂತ್ರಿಗಳ ಪಾತ್ರವನ್ನು ತಾವು ನಿರ್ವಹಿಸುತ್ತೀರಿ ಅಂತ ತಿಳಿದುಕೊಂಡು ಉಪ ಮುಖ್ಯಮಂತ್ರಿಗಳಾನ್ನಾಗಿ ಮಾಡಿಕೊಂಡಿದ್ದೇವೆ. ಅಲ್ಲಿ ಅವರು ಬರುವವರೆಗೂ ಕಾಯುವಂತಹ ಸ್ಥಿತಿಯಲ್ಲಿ ನಾವು ಇಲ್ಲ ಸ್ವಾಮಿ. ಲಾ ಮಿನಿಸ್ಟರ್ ಏನು ಸಲಹೆ ಕಳುಹಿಸಿಕೊಟ್ಟಿದ್ದೀರಿ ಉಪ ಮುಖ್ಯಮಂತ್ರಿಗಳ ಹತ್ತಿರ ಅವರು ದೂರವಾಣಿ ಮೂಲಕ ಮಾತನಾಡಿದರೋ ಇಲ್ಲವೋ ಅವರು ಏನು ಮಾಡುವವರು ಇದ್ದಾರೆ ಏಕೆಂದರೆ ಇದು ಈ ರಾಜ್ಯದ ರೈತರ ಜೀವನ್ಮರಣದ ಪ್ರಶ್ನೆ. ಅವರು ಬರುವವರೆಗೂ ಕಾದು ಸ್ಟೇಟ್‌ಮೆಂಟ್ ಕೇಳುವಂತಹ ಸ್ಥಿತಿಯಲ್ಲಿ ನಾವಂತೂ ಇಲ್ಲ. ದಯಮಾಡಿ

ಏನಾಗಿದೆ ಅಂತ ವಾಸ್ತವಿಕ ಸ್ಥಿತಿಯಲ್ಲಿ ಉಪ ಮುಖ್ಯಮಂತ್ರಿಗಳಾದರೂ ಹೇಳಬೇಕು ಇಲ್ಲಾ ಲಾ ಮಿನಿಸ್ಟರ್ ಆದರೂ ಹೇಳಬೇಕು ಇಲ್ಲದಿದ್ದರೆ ನಾವಂತೂ ಇಲ್ಲಿ ಕುಳಿತುಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲಾ ಸ್ವಾಮಿ. ಇದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೇವೆ. ದಯಮಾಡಿ ಇದು ಏನಾಗಿದೆ ಅಂತ ಉಪಮುಖ್ಯಮಂತ್ರಿಗಳಾಗಲಿ ಅಥವಾ ಲಾ ಮಿನಿಸ್ಟರ್ ಆಗಲಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಒಂದು ಮೂಲಭೂತವಾದ ಪ್ರಶ್ನೆ ಏನೆಂದರೆ ಮಾನ್ಯ ನಂಜೇಗೌಡರವರ ಬಗ್ಗೆ ನಾನು ಬಹಳ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇನೆ. ಅದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಅವರು ಮಾತನಾಡುವಾಗ ಪಾಪ ಎಷ್ಟು ಮನ ನೊಂದು ಹೇಳಿದರು ಅಂದರೆ, ದೂರವಾಣಿಯಲ್ಲಿ ನನ್ನ ಜೊತೆಯಲ್ಲಿ ಮುಖ್ಯಮಂತ್ರಿಗಳು ಮಾತನಾಡಿದರು ಅಂತ ಸಂತೋಷ ಮಾತನಾಡಿದ್ದಕ್ಕೆ. ನಾನು ಏನು ಹೇಳುತ್ತೇನೆ ನಾವು ಇದ್ದೇವೆ ಎಲ್ಲಾ ವಿರೋಧಪಕ್ಷದ ಮುಖಂಡರುಗಳು ಇದ್ದೇವೆ. ನಂಜೇಗೌಡರ ಹತ್ತಿರವೇ ಇವರು ದೂರವಾಣಿಯಲ್ಲಿ ಮಾತನಾಡಿಕೊಂಡು ನಡೆಸಿಕೊಳ್ಳುವುದಾದರೆ ಅದು ಸರಿಯಲ್ಲ. ಏಕೆಂದರೆ ನಾನು ಅವರ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೇನೆ ಅದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಮೂಲಭೂತವಾಗಿ ನಂಜೇಗೌಡರು ಅದರ ಅಥಾರಿಟಿ ಅಂತ ಕೂಡ ನಾನು ಹೇಳುತ್ತೇನೆ. ಈ ಸದನದಲ್ಲಿ ಅತ್ಯಂತ ಪ್ರೀತಿಯಿಂದ ಹೇಳುತ್ತೇನೆ ನಾನು ನಂಜೇಗೌಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಈ ಸಮಸ್ಯೆಯ ಬಗ್ಗೆ ಎಲ್ಲಾ ವಿರೋಧಪಕ್ಷದ ಮುಖಂಡರ ಜೊತೆಯಲ್ಲಿ ಕುಳಿತು ಅವರು ಡೆಲ್ಲಿಗೆ ಹೋಗುವುದಕ್ಕಿಂತ ಮುಂಚೆ ಅವರು ಸುಪ್ರೀಂ ಕೋರ್ಟಿಗೆ ಏನು ಪ್ರಮಾಣ ಪತ್ರ ಸಲ್ಲಿಸಬೇಕು ಏನು ಮಾಡಬೇಕು ಏನು ಕೊಡುತ್ತೀರಿ ಅಂತ ಚರ್ಚೆಯನ್ನು ಸೌಜನ್ಯಕ್ಕಾದರೂ ನಮ್ಮ ಮುಖ್ಯಮಂತ್ರಿಗಳು ಹೋಗಲಿಲ್ಲ ಮತ್ತು ಇಲ್ಲಿ ನ್ಯಾಯಾಂಗ ಸಚಿವರು ಇದ್ದಾರೆ ಅಲ್ಲಿ ಏನು ನಡೆದಿದೆ ತೆರೆಯಮರೆಯಲ್ಲಿ ಏನು ನಡೆದಿದೆ ಸ್ವಾಮಿ? ಇದನ್ನು ಏನೂ ಗುಟ್ಟಾಗಿ ಇಟ್ಟುಕೊಳ್ಳುವ ವಿಚಾರ ಅಲ್ಲ. ತೆರೆಯ ಮರೆಯಲ್ಲಿ ಏನು ನಡೆದಿದೆ? ಸುಪ್ರೀಂ ಕೋರ್ಟಿನಲ್ಲಿ ಏನನ್ನುಮಾಡಲು ಹೋಗಿದ್ದೀರಿ ನಿನ್ನೆ ಮುಖ್ಯಮಂತ್ರಿಗಳಿಗೆ ಹೇಳಿಕೆಯನ್ನು ನಾನು ಇಲ್ಲಿ ಹೇಳುತ್ತೇನೆ. ಹೊರಗಡೆ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕುಮಾರಿ ಜಯಲಲಿತಾ ಅವರನ್ನು ಒಲೈಸುವುದಕೋಸ್ಕರವಾಗಿ ಅವರನ್ನು ರಾಷ್ಟ್ರೀಯ ರಂಗಕ್ಕೆ ತರುವುದಕೋಸ್ಕರವಾಗಿ ನಮ್ಮ ಕಾವೇರಿ ಒಂದು ಪ್ರಶ್ನೆಯನ್ನು ಬಲಿ ಕೊಟ್ಟಾರು ಎನ್ನುವಂತಹ ಚಿಂತನೆ ಏನು ಮಾಡಿದ್ದಾರೆ ಅದರ ಬಗ್ಗೆ ನನಗೂ ಭಯ ಬಂದಿದೆ. ಅದ್ದರಿಂದ ಈ ಎಲ್ಲಾ ಪ್ರಶ್ನೆಗಳು ಬಗೆಹರಿಯಬೇಕು. ಎನ್.ಟಿ.ಆರ್ ಸ್ನೇಹಕೋಸ್ಕರವಾಗಿ ತೆಲುಗು ಗಂಗಾ ಆಯಿತು ಇಲ್ಲಿ ಜಯಲಲಿತಾ ಸ್ನೇಹಕೋಸ್ಕರವಾಗಿ ನಮ್ಮ ಕಾವೇರಿ ಹಿತ ಬಲಿಯಾಗುವುದು ಬೇಡ ಎಂದು ನಾನು ಈ ಮಾತನ್ನು ಹೇಳುತ್ತೀದ್ದೇನೆ. ನೀವು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೀರಿ? ನೀವು ನಮ್ಮನ್ನು ಯಾರನ್ನೂ ಕರೆದಿಲ್ಲ. ನೀವು ವಿರೋಧಪಕ್ಷದವರನ್ನು ಕತ್ತಲೆಯಲ್ಲಿ ಇಟ್ಟಿದ್ದೀರಿ ಈ ಬಗ್ಗೆ ಹಿಂದಿನ ಸರ್ಕಾರಗಳು ನಾನು ತಮಗೆ ಹೇಳುತ್ತೇನೆ ಪ್ರತಿ ತಿಂಗಳು ಕಾವೇರಿ ಕೃಷ್ಣಾ ಬಗ್ಗೆ ಸಭೆಯನ್ನು ಕರೆಯುತ್ತಿದ್ದರು. ಶ್ರೀಮಾನ್ ವೀರಪ್ಪ ಮೊಯಿಲಿಯವರು ಆಗಲಿ, ಬಂಗಾರಪ್ಪನವರು ಆಗಲಿ ಪ್ರತಿ ತಿಂಗಳು ಸಭೆಯನ್ನು ಕರೆದು ಯಾವ ಯಾವ ಹಂತದಲ್ಲಿ ಏನೇನು ಮಾಡಬೇಕು ಎಂದು ಹೇಳಿ ಎಲ್ಲಾ ವಿರೋಧಪಕ್ಷಗಳನ್ನು ನಂಬಿಕೆಗೆ ತೆಗೆದುಕೊಳ್ಳುತ್ತಿದ್ದರು. ನಮ್ಮ ಮುಖ್ಯಮಂತ್ರಿಗಳು ಈಗ

ನಮ್ಮನ್ನು ಯಾರನ್ನು ನಂಬಿಕೆಗೆ ತೆಗೆದುಕೊಳ್ಳುತ್ತಿದ್ದರು. ನಮ್ಮ ಮುಖ್ಯಮಂತ್ರಿಗಳು ಈಗ ನಮ್ಮನ್ನು ಯಾರನ್ನು ನಂಬಿಕೆಗೆ ತೆಗೆದುಕೊಂಡಿಲ್ಲ. ಇದರ ಬಗ್ಗೆ ಅವರ ಉದ್ದೇಶ ಎನು ಎನ್ನತಕ್ಕಂಥಾದ್ದು ಈ ಸಭೆಯಲ್ಲಿ ಚರ್ಚೆ ನಡೆಯಲಿ. ನನಗನಿಸುತ್ತದೆ. ಇಂತಹ ಅಮೂಲ್ಯವಾದ ವಿಚಾರದಲ್ಲಿ ತಮ್ಮಲ್ಲಿ ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ ಈ ಸದನವೂ ಒಪ್ಪುತ್ತೇ ಅಂತ ಕಾಣುತ್ತದೆ ಈಗ ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ತಾವು ಈ ವಿಷಯದ ಚರ್ಚೆಗೆ ಅವಕಾಶ ಕೊಡಿ ಅಂತ ನಾನು ಕೇಳುತ್ತಿದ್ದೇನೆ.

ಶ್ರೀ ಜೆ.ಎಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಯಾರದೇ ಸ್ನೇಹಕೋಸ್ಕರ ಅದು ಎನ್.ಟಿ.ಆರ್. ನರಸಿಂಹರಾಯರು ಇರಲಿ ಅಥವಾ ಜಯಲಲಿತ ಇರಲಿ ರಾಜ್ಯದ ಹಿತರಕ್ಷಣೆಯಲ್ಲಿ ಒಂದು ಅಂಶ ಕೂಡ ನಾವು ರಾಜಿ ಆಗುವುದಿಲ್ಲ. ಯಾರೊಡನೆಯೂ ಕೂಡ ರಾಜಿ ಆಗುವುದಿಲ್ಲ. ಅದಕ್ಕೆ ಅವರು ಬಂದು ಈಗ ನಂಜೇಗೌಡರ ಹತ್ತಿರ ಅಷ್ಟು ಹೊತ್ತಿಗೆ ಫೋನ್ ಮಾಡಿ ಕೇಳಿದ್ದಾರೆ ಅಂದರೆ does it not indicate the sincerity of his approach? ಏಕೆಂದರೆ ಅವರಿಗೆ ವಿಷಯ ಗೊತ್ತಿದೆ ಅಂತ. ಅವರು ಬರೀ ವಿಧಾನ ಸಭಾ ಸದಸ್ಯರು ಅಂತ ಅಲ್ಲ. ಅವರು ಸದಸ್ಯರು ಅಲ್ಲದಿದ್ದರೂ ಅವರಿಗೆ ಕರ್ನಾಟಕ ರಾಜ್ಯದ ನೀರಾವರಿ ವಿಷಯದಲ್ಲಿ ನಾನೇ ಆಗಲಿ ಅಥವಾ ದೇವೇಗೌಡರು ಆಗಲಿ ನಾವು ಯಾರೇ ಆಗಲಿ ಅವರನ್ನು ಕೇಳುತ್ತೇವೆ. ಹಿಂದೆಯೂ ಸಹ ಹಲವಾರು ಸಲ ಈ ನೀರಾವರಿ ವಿಷಯದಲ್ಲಿ ಅವರನ್ನು ಕನಸಲ್ಟ ಮಾಡಿದ್ದೇವೆ. ಆ ದೃಷ್ಟಿಯಿಂದ ಇಲ್ಲಿ ವಿರೋಧಪಕ್ಷದ ಖರ್ಗೆಯವರನ್ನು ಕೇಳಲಿಲ್ಲ, ಅಥವಾ ವಾಟಾಳ್ ನಾಗರಾಜರವರನ್ನು ಕೇಳಲಿಲ್ಲ ಅಂತ ಅಲ್ಲ. ಇದೆಲ್ಲಾ ರಾಜ್ಯದ ಹಿತದೃಷ್ಟಿಯಿಂದ ವಿಷಯ ಅವರಿಗೆ ಚೆನ್ನಾಗಿ ಗೊತ್ತಿರುವುದರಿಂದ ಕೇಳಿರಬಹುದು. ಆದರೆ ಅದನ್ನೇ ಒಂದು ಮುಖ್ಯ ಮಾಡುವುದೇ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅನಾವಶ್ಯಕವಾಗಿ ನಾನು ಇದನ್ನು ಮುಖ್ಯಮಾಡುವುದಕ್ಕೆ ಹೋಗುವುದಿಲ್ಲ. ರಾಜಕೀಯ ಕೂಡ ಮಾಡುವುದಿಲ್ಲ. ನನ್ನದೇನೆಂದರೆ ತಾವೇ ಹೇಳಿದಿರಿ. ಮುಖ್ಯಮಂತ್ರಿಗಳು ಇವತ್ತು 9 ಗಂಟೆಗೆ ನಾವು ಅಫಿಡವಿಟ್ ಫೈಲ್ ಮಾಡಲೇಬೇಕು ಅಂತ ಹೇಳಿ ಅಫಿಡವಿಟನ್ನು ಇಲ್ಲಿಂದ ಹೊತ್ತುಕೊಂಡು ಹೋಗುವಾಗ ಟೆಲಿಫೋನ್‌ನಲ್ಲಿ ಅವರು ತಮ್ಮ ಸಲಹೆಯನ್ನು ಕೊಡುವುದಕ್ಕೆ ಆಗುತ್ತದೆಯೇ? ಅವತ್ತೇ ಅವರು ತಿದ್ದುಪಡಿ ಮಾಡಿ ಲಾ ಸೆಕ್ರೆಟರಿಯನ್ನು ಕರೆಯಿಸಿ ತಿದ್ದುಪಡಿ ಮಾಡುವುದಕ್ಕೆ ಆಗುತ್ತಿತ್ತೇ? ನೋಡಿ ನಾವು ಸ್ವಲ್ಪ ಪ್ರಾಕ್ಟಿಕಲ್ ಆಗಿ ಮಾತನಾಡೋಣ ಸುಮ್ಮನೇ ಟೆಲಿಫೋನ್ ಇದೆ ಅಂತ ನಾನು ಹೋಗುತ್ತಿದ್ದೇನೆ ಗುಡ್ ಬೈ ಅಥವಾ ಹ್ಯಾಪಿ ಲ್ಯಾಂಡಿಂಗ್ ಅಂತ ಹೇಳಬೇಕೊ? ಏನು ಇದು? ಕನ್‌ಸಲ್‌ಟೇಟಿಂಗ್ ಮಾಡಬೇಕು ಅಂದರೆ ಕರೆಯಿಸಿ ನಮ್ಮ ಪ್ಲಾನ್ ಈ ರೀತಿಯಾಗಿ ಇದೆ, ನಮ್ಮ ಸ್ಟ್ಯಾಂಡ್ ಈ ರೀತಿಯಾಗಿದೆ ಈ ರೀತಿಯಾಗಿ ಅಫಿಡವಿಟ್ ಕೊಟ್ಟಿದೆ ಕನಿಷ್ಟ ನೀವು ಏನು ಅಫಿಡವಿಟ್ ಸ್ಟ್ಯಾಂಡ್ ಈ ರೀತಿಯಾಗಿದೆ ಈ ರೀತಿಯಾಗಿ ಅಫಿಡವಿಟ್ ಕೊಟ್ಟಿದೆ ಕನಿಷ್ಟ ನೀವು ಏನು ಅಫಿಡವಿಟ್ ಫೈಲ್ ಮಾಡುತ್ತಿದ್ದೀರಿ, ಅಥವಾ ಏನು ಇಂಟೇರಿಯರ್

ಪಿಟಿಶನ್ ಏನು ನೀವು ಫೈಲ್ ಮಾಡುತ್ತಿದ್ದೀರಿ ಅದು ಒಂದು 10 ಪೇಜು ಅದರೂ ಇರಲೇ ಬೇಕಲ್ಲ. ಆ 10 ಪೇಜನ್ನು ಟೆಲಿಫೋನ್‌ನಲ್ಲಿ ಅವರು ಓದಿ ಹೇಳಿದರೆ, ಅಥವಾ ಇವರು ಆ 10 ಪೇಜನ್ನು ಗ್ರಾಸ್ ಮಾಡಿಕೊಂಡು ನಾನು ಅವರ ಎಬಿಲಿಟಿ ಬಗ್ಗೆ ಕ್ವಶ್ಚನ್ ಮಾಡುತ್ತಿಲ್ಲ ಅಥವಾ ನಾನು ಅವರ ಅಥಾರಿಟಿ ಬಗ್ಗೆ ಕೂಡ ಕ್ವಶ್ಚನ್ ಮಾಡುತ್ತಿಲ್ಲ. ಈಗಾಗಲೇ ನಾವೆಲ್ಲರೂ ಒಪ್ಪಿಕೊಂಡಿದ್ದೇನೆ ಈ ಒಂದು ನೀರಾವರಿ ಬಗ್ಗೆ ಅವರಿಗೆ ಹೆಚ್ಚಿನ ಕಳಕಳಿ ಇದೆ ಓದಿಕೊಂಡಿದ್ದಾರೆ ಮಾಹಿತಿ ಇದೆ. ಅದೂ ಚನ್ನಬಸಪ್ಪನವರ ಗರಡಿಯಲ್ಲಿ ತಯಾರಾದಂತಹ ವ್ಯಕ್ತಿ ಇದ್ದಾರೆ. ಅದರಲ್ಲಿ ಯಾರಿಗೂ ಭಿನ್ನಾಭಿಪ್ರಾಯ ಇಲ್ಲ. ಆದರೆ ಎಷ್ಟೇ ಪ್ರಮೀಣರಾಗಿರತಕ್ಕಂಥ ಸದಸ್ಯರು ಇದ್ದರೂ ಕೂಡ ಬರೀ ಟೆಲಿಫೋನ್ ಮೇಲೆ ಅವರ ಸಲಹೆ ಕೇಳಿಕೊಂಡು ಹೋಗುವುದಕ್ಕೆ ಸಾಧ್ಯ ಇಲ್ಲ. ಬರೀ ಟೆಲಿಫೋನ್ ಮೇಲೆ ಮುಕ್ತಾಯವಾಗುತ್ತದೇ ಅಂದರೆ ಎಲ್ಲರಿಗೂ ಕೂಡ ಒಬ್ಬರಿಗೊಬ್ಬರಿಗೆ ನಾಳೆ ಸುಮ್ಮನೇ ಮೀಟಿಂಗ್ ಕರೆಸುವುದು ಬೇಡ ಅವರಿಗೊಂದು ಟೆಲಿಫೋನ್ ಮಾಡಿ ಇವರಿಗೊಂದು ಟೆಲಿಫೋನ್ ಮಾಡಿ 5 ನಿಮಿಷದಲ್ಲಿ ಮುಗಿಯುತ್ತದೆ ಟಿ. ಎ.ಉಳಿಯುತ್ತದೆ ಡಿ.ಎ. ಉಳಿಯುತ್ತದೆ. ಒಂದು ಕಡೆ ಸೇರುವುದು ಬೇಡ. ತಾವು ಹೇಳಿದಿರಿ ಅವರಿಗೆ ಎಷ್ಟು ಸೀರಿಯಸನೆಸ್ ಇದೆ ಅದಕ್ಕಾಗಿಯೇ ಅವರು ಅವರಿಗೆ ಟೆಲಿಫೋನ್ ಮಾಡಿದ್ದಾರೆ ಅಂದರೆ ಅವರಿಗೆ ಒಂದು ಟೆಲಿಫೋನ್ ಮಾಡಿದ ತಕ್ಷಣ ನಿಮ್ಮದು ಕಳಕಳಿ ವ್ಯಕ್ತ ಆಯಿತೇ? ಕಳಕಳಿ ನೀವು ಯಾವಾಗ ಹೇಳುಬಹುದಾಗಿತ್ತು ಅಂದರೆ ನಿಮಗೆ ರಾತ್ರಿ ಟೈಮ್ ಇತ್ತು. ನಿನ್ನೆ ತಾವು ಇಲ್ಲಿ ಕುಳಿತಾಗ ಏನು ಪ್ಯಾಕ್ಸ ಮೆಸ್ಸೇಜ್ ತೋರಿಸುತ್ತಿದ್ದೀರಿ ಬೇಕಾದರೆ ಇದು ಆದ ಮೇಲೆ ರಾತ್ರಿ 8 ಗಂಟೆ 9 ಗಂಟೆ 10 ಗಂಟೆಗೆ ಕೂಡಿಸಿಕೊಂಡು ಇದು ಏನು ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಚರ್ಚೆ ಮಾಡಬಹುದಾಗಿತ್ತು. ಅದೆಲ್ಲಾಬಿಟ್ಟು ಹೋಗುವಾಗ ಟೆಲಿಫೋನ್ ಮಾಡಿದರು ಅವರು ಅಂದರೆ ಇದು ನಿಜವಾಗಿಯೂ ಈ ಸದನದ ಸದಸ್ಯರಿಗೆ ಗೌರವ ತರತಕ್ಕಂಥಾದ್ದು ಅಲ್ಲ. ಸರ್ಕಾರದ ಒಂದು ನಿಲುವು, ರಾಜ್ಯದ ನಿಲುವು ಈ ದೇಶದ ಜನತೆಯ ನಿಲುವು ಒಂದೇ ಇದೆ ಎನ್ನತಕ್ಕಂಥಾದ್ದು ನಿಮ್ಮ ಅಭಿಪ್ರಾಯ ಇದ್ದರೆ ನೀವು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಿ ಇಲ್ಲಾ ಅವರಿಗೆ ಒಂದು ಕೇಳುತ್ತೇವೆ ಇವರಿಗೆ ಒಂದು ಕೇಳುತ್ತೇವೆ ಅಂದ್ರೆ ಅದು ಅಷ್ಟು ಸಮಂಜಸವಾಗುವುದಿಲ್ಲ ಮತ್ತು ಅದು ಅಷ್ಟು ಸರಿ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಪದೇ ಪದೇ ಹೇಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ ನಾನು ಏತಕ್ಕೆ ಹೇಳಿದೆ ಅಂದರೆ, ಇದೆಲ್ಲಾ ನಾವು ನಡೆದು ಬಂದ ದಾರಿ. ನಾನು ಇದನ್ನೆಲ್ಲಾ ಹೇಳಬೇಕು ಅಂತ ಇರಲಿಲ್ಲ. ನನಗೆ ಮನಸ್ಸಿಗೆ ಬಹಳ ನೋವಾಗುತ್ತದೆ ಆದರೆ ಹೇಳಲೇಬೇಕಾಗುತ್ತದೆ. ಇಲ್ಲಿ ಏನಾಯಿತು ಅಂತ ನಾನು ಸನ್ಮಾನ್ಯ ಜೆ.ಎಚ್. ಪಟೇಲ್‌ರ ಗಮನಕ್ಕೆ ಒಂದು ವಿಚಾರ ತರುತ್ತೇನೆ. ನಮ್ಮ ಗುರುಪಾದ ಸ್ವಾಮಿಯವರು ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. ಆಗ ವಿ.ಪಿ. ಸಿಂಗರವರು ಪ್ರಧಾನ ಮಂತ್ರಿಗಳಾಗಿದ್ದರು. ಅವರು ಸಾರ್ವತ್ರಿಕವಾಗಿ ಒಂದು ಹೇಳಿಕೆ ಕೊಟ್ಟು ಕ್ಷಮೆಯಾಚನೆ ಮಾಡಿದರು ಈ ರಾಜ್ಯದ ಜನನತೆಯನ್ನು ಏತಕ್ಕೆ ಕೇಳಿದರು? ವಿ.ಪಿ. ಸಿಂಗರವರ ಸರ್ಕಾರ ಇದ್ದಾಗ ಒಂದು ರೀತಿ ರಾಜಕೀಯ ಕಾರಣಕೋಸ್ಕರವೇ ಕಾವೇರಿ ಟ್ರಿಬ್ಯುನಲ್‌ಗೆ ಹೋಗಬೇಕು ಎನ್ನತಕ್ಕಂಥ ತೀರ್ಮಾನವಾಗಿದ್ದುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯ.

ಕರುಣಾನಿಧಿಯವರನ್ನು ಸಂತೃಪ್ತಿಗೊಳಿಸುವುದಕ್ಕೋಸ್ಕರ, ಕಾವೇರಿ ಟ್ರಿಬ್ಯೂನಲನ್ನು ನೇಮಕ ಮಾಡುವಂತಹ ಪರಿಸ್ಥಿತಿ ಬಂತು. ಗುರುಪಾದಸ್ವಾಮಿಯವರು ಏನು ಹೇಳಿದರು, ಕೇಂದ್ರಸರ್ಕಾರದಲ್ಲಿದ್ದೂ ನಾನು ನನ್ನ ಕರ್ತವ್ಯದಲ್ಲಿ ಪೇಲಾದೆ ಎಂದು ಒಪ್ಪಿಕೊಂಡು ರಾಜ್ಯದ ಜನರ ಕ್ಷಮೆಯಾಚನೆ ಮಾಡಿದರು. ಆದರೆ ಅಷ್ಟುಹೊತ್ತಿಗೆ ಬೆಂಕಿಬಿದ್ದು ಆಗಿಹೋಗಿತ್ತು. ನಮಗೆ ಅನಾಹುತ ಆಗಿಹೋಗಿತ್ತು. ಏಕೆಂದರೆ ವಾಟಾಳ್ ಹೇಳಿದರು ಹೊರಗಡೆ ಸ್ಟೇಟಮೆಂಟ್ ಕೊಡಬೇಕೆಂದು. ಇದರಲ್ಲೇನಾಗಿದೆ ಎಂದರೆ ಈಗ ವೈಯಕ್ತಿಕವಾಗಿ ನನಗೂ ಜೆ.ಎಚ್.ಪಟೇಲರಿಗೂ ಭಾರಿ ವಿಶ್ವಾಸ ಇದೆ. ಆದರೆ ಈ ರಾಜ್ಯಕ್ಕೆ ಒಂದು ಪಕ್ಷ ಅವರಿಂದ ಅನಾಹುತ ಆಗುತ್ತದೆ ಎಂದಾಗ ವೈಯಕ್ತಿಕವಾದ ವಿಶ್ವಾಸ ಮತ್ತೊಂದು ಇಟ್ಟುಕೊಂಡು ನಾವು ಸುಮ್ಮನಿರುವುದಕ್ಕಾಗುವುದಿಲ್ಲ. ಪ್ರಾರಂಭದಲ್ಲಿ ಒಂದು ತರಹ ಇತ್ತು, ಮುಖ್ಯಮಂತ್ರಿ ದೇವೇಗೌಡರು ಇಲ್ಲಿ ಅಧಿಕಾರ ವಹಿಸಿಕೊಂಡಾಗ. ಇತ್ತೀಚಿನದಿನಗಳಲ್ಲಿ ಹೆಗಡೆಯವರು ಹೋದಹಾದಿಯಲ್ಲೇ ಹೋಗುವ ಹಾಗೆ ಕಾಣುತ್ತಿದೆ, ರಾಷ್ಟ್ರಮಟ್ಟದ ರಾಜಕಾರಣಕ್ಕೆ. ನಿಜಲಿಂಗಪ್ಪನವರಿಂದ ಏನಾಯಿತು ರಾಜ್ಯಕ್ಕೆ ರಾಜಕೀಯ ಕಾರಣದಿಂದ ಇವತ್ತು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಉದ್ದಕ್ಕೂ ಇದೆ ನಮ್ಮ ರಾಜಕೀಯ ಕಾರಣಕ್ಕಾಗಿ ನಮ್ಮ ನೀರಾವರಿ ಹಿತ ಧಕ್ಕೆಯಾಗಿದೆ ಎಂಬುದನ್ನು ಅಂಕಿಅಂಶಗಳ ಸಮೇತ ನಾನು ಸದನಕ್ಕೆ ಒದಗಿಸಿಕೊಡುತ್ತೇನೆ. ಪುನರಪಿ ಅಂಥಾದಾಗಿಬಾರದು. ಇದು ಏನೋ ಅಚಾತುರ್ಯ, ಫೋನ್ ಮಾಡಿದರು ಅಂದರೆ ನಾನು ದೊಡ್ಡವನು ಅಂತ ನಾನು ಅಂದುಕೊಳ್ಳುವುದಿಲ್ಲ ನನಗೆ ಕಪಾಳಕ್ಕೆ ಹೊಡೆದಹಾಗಾಯಿತು ಅವರು ಫೋನ್‌ನಲ್ಲಿ ಕೇಳಿದಾಗ. ಏನಪ್ಪ ಇಂತಹ ವಿಚಾರದಲ್ಲಿ ಏನೋ ನಾಣಯ್ಯನವರು ನಿನ್ನೆ ಓದಿದರು, ಅದೇನು ಅಂತ ನಾನು ಕೇಳಿಸಿಕೊಳ್ಳುವುದ್ಕೆ ಹೋಗಲಿಲ್ಲ, ಅದನ್ನು ಓದಿಬಿಟ್ಟರೆ ನಮ್ಮ ಸ್ಟೇಟಮಂಟ್ ಈ ತರಹ ಕೊಡುತ್ತೇವೆ ಅಂತ, ಆ ಸ್ಟೇಟಮೆಂಟೆಲ್ಲ ಈ ಸಭೆಯಲ್ಲಿ ಚರ್ಚಿಯಾಗಬೇಕೆಂದು ನಾನು ಹೇಳುವುದಿಲ್ಲ. ನನಗೆ ಗೊತ್ತಿದೆ, ಈ ವಿಷಯ ಈ ಸಭೆಯಲ್ಲಿ ಏನು ಚರ್ಚೆಯಾಗಬೇಕು, ಏನಾಗಬಾರದು ಇಂತಹ ವಿಷಯಗಳಲ್ಲಿ, ಇವು ಭಾರಿ ಸೆನ್ಸಿಟಿವ್ ಮ್ಯಾಟರ್ಸ್‌ಎಂದು ಗೊತ್ತಿದೆ, ಹೊರಗೆ ಯಾವುದು ಚರ್ಚೆಯಾಗಬೇಕು ಯಾವುದು ಆಗಬಾರದು ಎಂಬ ಪರಿಜ್ಞಾನ ನನಗಿದೆ. ಆದರೆ ಒಂದು ದಿನ ಕೋರ್ಟಿನಲ್ಲಿ ಕೇಸ್ ನಡೆಯುತ್ತಿದೆ ನಮ್ಮ ನಿಲುವು ಈ ತರಹ ಇದೆ, ಅಥವಾ ಇದರಿಂದ ರಾಜ್ಯಕ್ಕೆ ಅನುಕೂಲವಾಗುತ್ತದೆಯೇ ಅನಾನುಕೂಲ ಏನಾಗುತ್ತದೆ? ನಾವು ಯಾವ ನಿಲುವು ತೆಗೆದುಕೊಳ್ಳಬೇಕು. ಇದೇನು ಅಂದರೆ ನಮ್ಮ ಜೆ.ಎಚ್. ಪಟೇಲರು ಒಂದು ಮಾತು ಹೇಳುವರು. ಅಪ್ಪಾ ನೀನು ಹೋಗು ಅಂದರೂ ಹೋಗುತ್ತೇವೆ ಬೇಡ ಅಂದರೂ ಹೋಗುತ್ತೇನೆ ಜಾತ್ರೆಗೆ ಹೋಗಲೋ ಬೇಡವೋ ಅಂತ, ಅಪ್ಪ ಏನು ಮಾಡಬೇಕು? ಹೇಗಿದ್ದರೂ ಜಾತ್ರೆಗೆ ಹೋಗುತ್ತಾನಲ್ಲ, ಏನಾದರೂ ಮಾಡಿಕೋ ಅನ್ನಬೇಕು ಇಲ್ಲ ಹೋಗು ಅನ್ನಬೇಕು, ಏಕೆಂದರೆ ಬೇಡ ಅಂದರೂ ಹೋಗುವವನೆ. ನಾಣಯ್ಯನವರಾದರೂ ಆಗಲಿ, ಹೋಗಲಿ ಮುಖ್ಯಮಂತ್ರಿಗಳಿಗೆ ಬಿಡುವಿಲ್ಲ ಇವರಾದರೂ ಕರೆದು ಇಂಥಾ ಸ್ಟೇಟ್‌ಮೆಂಟ್, ಪರಿಸ್ಥಿತಿ ಹೀಗಿದೆ, ಸುಪ್ರೀಂಕೋರ್ಟಿನಲ್ಲಿ ಈ ಮಟ್ಟಕ್ಕೆ ಬಂದಿದೆ. ನಾವು ಪತ್ರಿಕೆ ಓದಿ ಕಾವೇರಿ ವಿಚಾರದಲ್ಲಿ ಏನೇನು ನಡೆಯುತ್ತಿದೆ ತಿಳಿದುಕೊಳ್ಳುವ ಮಟ್ಟಕ್ಕೆ ಬಂದುಬಿಟ್ಟರೆ ನಮ್ಮ ಸ್ಥಿತಿ ಏನು? ಪತ್ರಿಕೆ ಓದಿ ತಮಿಳುನಾಡಿನವರು ಹೀಗೆ ಹಾಕಿದ್ದಾರೆ, ಸುಪ್ರೀಂಕೋರ್ಟ್ ಮುಂದೆ ಇದು ಬರುತ್ತದೆ, ನಾವು ಆ ಮೂಲಕ ತಿಳಿದುಕೊಳ್ಳಬೇಕು.

ರಾಜ್ಯಸರ್ಕಾರ ಇದರ ಗಂಭೀರತೆ ಪರಿಗಣಿಸಿ ಎಲ್ಲರನ್ನೂ ಕರೆದು ಏನಾದರೂ ಕ್ರಮ ತೆಗೆದುಕೊಳ್ಳೋಣ, ನೀವು ಸರೀನೆ ಮಾಡಿರಬಹುದು, ಇಲ್ಲಾಂತ ನಾನು ಹೇಳುವುದಿಲ್ಲ ಅಥವಾ ನಿಮ್ಮ ಕರ್ತವ್ಯದಲ್ಲಿ ಫೇಲಾಗಿದ್ದೀರಿ ಅಂತಲೂ ನಾನು ಹೇಳುತ್ತಾ ಇಲ್ಲ. ಈಗ ನೀವು ಏನು ಮಾಡಿದ್ದೀರಿ ಬೇಕೆ ಅನಾಹುತ ಆಗಕೂಡದೇ? ನೋಡಿ ಶ್ರೀಮತಿ ಜಯಲಲಿತಾ ಅವರು ಸಮುದ್ರದಂಡೆಯಲ್ಲಿ ಒಂದು ದಿವಸ ಕುಳಿತರೂ ಸಾಕು ಪ್ರಧಾನಮಂತ್ರಿಗಳು ಜಲಸಂಪನ್ಮೂಲ ಸಚಿವರನ್ನು ಕಳಿಸುತ್ತಾರೆ ಅವರ ಕಾಲಬುಡಕ್ಕೆ. ಈಗ ನಾವು ಮುಖ್ಯಮಂತ್ರಿಯಾಗಿ ಆ ಕಾಲಬುಡಕ್ಕೆ ಹೋಗಿ ಹಿಡಿದರೆ ಇದು ಸ್ವಲ್ಪ ಕಷ್ಟವಾಗುತ್ತದೆ. ಮುಖ್ಯಮಂತ್ರಿಗಳು ರಾಜ್ಯದ ಹಿತ ಕಾಪಾಡುವ ಕಾಲದಲ್ಲಿ ರಾಜಕೀಯ ಹಿತ ಮರೆಯಬೇಕಾಗುತ್ತದೆ. ಇದನ್ನು ನಾನು ಖಚಿತವಾಗಿ ಹೇಳುತ್ತೇನೆ. ಏಕೆಂದರೆ ರಾಜಕೀಯ ಹಿತಮಾಡುವುದಕ್ಕೆ ಹೋದಾಗಲೆಲ್ಲ ನಮ್ಮ ರಾಜ್ಯಕ್ಕೆ ಅಹಿತವಾಗಿದೆ ನೀರಾವರಿಯಲ್ಲಿ. ರಾಜಕೀಯ ಹಿತ ಕಾಪಾಡಲು ಹೋದಾಗಲೆಲ್ಲ ನಮ್ಮ ಮುಖಂಡರು, ಅಧಿಕಾರದ ಚುಕ್ಕಾಣಿ ಹಿಡಿದಂತಹ ಜನ ಈ ರಾಜ್ಯದ ಹಿತ ಮಣ್ಣುಮುಕ್ಕಿದೆ ಎಂಬುದನ್ನು ನಾನು ನೆನೆದುಕೊಳ್ಳುತ್ತಿದ್ದೇನೆ. ಈಗಲೂ ಮತ್ತೊಮ್ಮೆ ಹೇಳುತ್ತೇನೆ, ರಾಜಕೀಯ ಹಿತ ಮರೆತು ನೀವು ರಾಜ್ಯದ ಹಿತದ ಕಡೆ ಗಮನಕೊಡಿ. ನಿಮ್ಮ ರಾಜಕೀಯ ಹಿತ ಮಾಡುವುದಕ್ಕೆ ಹೋದಂಥ ಕಾಲದಲ್ಲಿ ರಾಜ್ಯಕ್ಕೆ ತೊಂದರೆ ಆಗುತ್ತದೆ ಎಂದರೆ ನೀವು ದಯವಿಟ್ಟು ರಾಜಕೀಯ ಹಿತ ಮರೆಯಲೇಬೇಕಾಗುತ್ತದೆ. ನೀವು ಮೊದಲು ಕರ್ನಾಟಕದವರಾಗಿ ವರ್ತಿಸಿ, ಆಮೇಲೆ ನಿಮ್ಮ ದಳ ಮತ್ತೊಂದು, ನಿಮ್ಮ ನ್ಯಾಷನಲ್ ಫ್ರಂಟ್. I am not worried about all those things. I am worried about these things.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅಧ್ಯಕ್ಷರೇ ಮಾನ್ಯ ಹಿರಿಯ ಸದಸ್ಯರು ಬಹಳ ಪ್ರಮುಖವಾದ ವಿಷಯವನ್ನು ಸದನದ ಗಮನಕ್ಕೆ ತಂದಿದ್ದಾರೆ. ಇವತ್ತಿನ ಕರ್ನಾಟಕದ ಪರಿಸ್ಥಿತಿ ಏನಿದೆ ಎಂದು ಅಲೋಚನೆ ಮಾಡಬೇಕು. ಒಂದು ಕಡೆ ಬಹಳ ಬರಗಾಲ. ಇನ್ನೊಂದು ಕಡೆ ಯಾವ್ಯಾವ ಕೆರೆ ತುಂಬಬೇಕೋ ಅವ್ಯಾವೂ ತುಂಬಿಲ್ಲ. ಆದ್ದರಿಂದ ಈಗಲಾದರೂ ಮಧ್ಯಂತರ ತೀರ್ಪಿನ ಅನಾನುಕೂಲತೆಯನ್ನು ಅನುಭವಿಸಿದ್ದೀವಿ, ಅದೇ ರೀತಿ ಇನ್ನೊಂದು ತೀರ್ಪು ಕೊಡುವಂತಹ ಪರಿಸ್ಥಿತಿ ಶೃಷ್ಟಿಯಾದರೆ, ಇದಕ್ಕಿಂತ ದೊಡ್ಡ ಆತ್ಮಹತ್ಯೆ ಇನ್ಯಾವುದೂ ಇಲ್ಲ. ಆದ್ದರಿಂದ ಇಂತಹ ಸಮಸ್ಯೆಗಳನ್ನು ಅತ್ಯಂತ ಗಂಭೀರವಾಗಿ ಚರ್ಚೆ ಮಾಡಬೇಕು, ವಿರೋಧಪಕ್ಷದವರನ್ನು ಕರೆದು ಚರ್ಚೆ ಮಾಡಬೇಕು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಬೇಕು. ನಾನು ಕೆಲವು ವಿಷಯಗಳ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ, ಅದೇನೋ ನಮಗೆ ಗೊತ್ತಿಲ್ಲ, ಅತ್ಯಂತ ಗಂಭೀರವಾದ ಯಾವುದೇ ಸಮಸ್ಯೆಯನ್ನು ಅವರ ಹತ್ತಿರ ತೆಗೆದುಕೊಂಡುಹೋದರೆ ಅತ್ಯಂತ ಗಂಭೀರವಾದ ಚರ್ಚೆ ಮಾಡುವಂಥ ವಿಶಾಲವಾದ ಭಾವನೆ ಏಕಿಲ್ಲ ಎಂದು ನನಗೂ ಗೊತ್ತಾಗುತ್ತಿಲ್ಲ. ನಾನೊಬ್ಬ ಕಿರಿಯ ಸದಸ್ಯ. ಆದ್ದರಿಂದ ದಯವಿಟ್ಟು ಅಧ್ಯಕ್ಷರೇ ವಿರೋಧಿ ಸದಸ್ಯರು ರಾಜ್ಯದ ಯುವ್ದೇ ಹಿತದೃಷ್ಟಿಯಿಂದ ಅಲೋಚನೆ ಎಂದು ಮಾಡಿ ಹೇಳುವಂಥ ವಿಷಯಗಳಲ್ಲಿ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಸನ್ಮಾನ್ಯ ಉಪನಾಯಕರು ಈಗಾಗಲೇ ಹೇಳಿದ್ದಾರೆ. ಸಭಾನಾಯಕರು ಸಮಗ್ರವಾದ ಹೇಳಿಕೆಯನ್ನು ಈ ಸದನದಲ್ಲಿ ಕೊಡುತ್ತಾರೆ .ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ ಎಂಬ ಒಂದು ಅಪಾದನೆಗೆ ನಾನು ಗುರಿಯಾಗಬಾರದು ಎಂದು ಪ್ರಸ್ತಾಪವಾಗಲಿ ಎಂದು ಕಾನೂನಿನ ಚೌಕಟ್ಟು ಮೀರಿ ರಾಜ್ಯದ ಹಿತ ಗಮನದಲ್ಲಿಟ್ಟುಕೊಂಡು ಇದಕ್ಕೆ ಅವಕಾಶ ಕೊಟ್ಟಿದ್ದೇನೆ. ತಮ್ಮ ಎಲ್ಲಾ ಭಾವನೆಗಳನ್ನು ಎಲ್ಲಾ ಅನಿಸಿಕೆಗಳನ್ನು ಸನ್ಮಾನ್ಯ ಸಭಾನಾಯಕರು ಬಂದು ಹೇಳಿಕೆ ಕೊಡುವಂತಹ ಸಂದರ್ಭದಲ್ಲಿ ಈ ವಿಷಯವನ್ನು ಚರ್ಚೆಗೆತ್ತಿಕೊಳ್ಳುವಂತಹ ಸಂದರ್ಭದಲ್ಲಿ ಪುನರವ್ಯಕ್ತಪಡಿಸುಬಹುದು. ಇನ್ನು ಆಸಕ್ತ ಸದಸ್ಯರಿರುವಂಥವರಿಗೂ ಆಗ ಅವಕಾಶ ಏರ್ಪಾಟು ಮಾಡೋಣ. ತಾವೆಲ್ಲ ದಯಮಾಡಿ ಈಗ ಸಹಕರಿಸಬೇಕು. ಪ್ರಶ್ನೋತ್ತರ ಕೂಡ ಈ ಸದನದ ಗೌರವಾನ್ವಿತ ಸದಸ್ಯರ ಪ್ರಮುಖವಾದ ಹಕ್ಕು. ಅದರ ಚಲಾವಣೆಗೆ ನಿಮ್ಮೆಲ್ಲ ಸಹಕಾರ ಕೋರುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

1995 ಜನವರಿಯಿಂದ 95 ಜೂನರವರೆಗೆ ನಡೆದ ಡಕಾಯಿತಿಗಳು

76 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995 ಜನವರಿಯಿಂದ 1995 ಜೂನ್ ವರೆಗೆ ರಾಜ್ಯದಲ್ಲಿ ನಡೆದಿರುವ ಡಕಾಯಿತಿಗಳೆಷ್ಟು, ಹಾಗೂ ಡಕಾಯಿತಿಗಳು ಎಲ್ಲೆಲ್ಲಿ ನಡೆದಿವೆ. (ಸ್ಥಳಗಳ ಹೆಸರು ಮತ್ತು ಡಕಾಯಿತರ ಸಂಖ್ಯೆ ತಿಳಿಸುವುದು).*

ಆ) *ಈ ಡಕಾಯಿತಿಗಳಲ್ಲಿ ಉಂಟಾಗಿರುವ ಸಾವು ಮತ್ತು ಅಪಹರಣದ ಮೌಲ್ಯಗಳೆಷ್ಟು? (ಸ್ಥಳಗಳ ಹೆಸರು ಮತ್ತು ಡಕಾಯಿತರ ಸಂಖ್ಯೆ ತಿಳಿಸುವುದು)*

ಇ) *ಈ ಡಕಾಯಿತಿಗಳಲ್ಲಿ ಎಷ್ಟು ಡಕಾಯಿತರನ್ನು ಬಂಧಿಸಲಾಗಿದೆ?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿಗಳು) :

ಅ) 71.

ವಿವರಗಳನ್ನು ಅನುಬಂಧದಲ್ಲಿ-ಅ ಲಗತ್ತಿಸಿದೆ.

ಆ) 6 ಸಾವುಗಳು. ಅಪಹರಣದ ಮೌಲ್ಯ ರೂ. 85,41,915-00 ವಿವರಗಳನ್ನು ಅನುಬಂಧ - 4 ಲಗತ್ತಿಸಿದೆ.

ಇ) 61.